ನಮ್ಮೊಡನೆ

# ವಿಚಾರಣಾ ಕೈದಿಗಳ ಅತಂತ್ರ ಸ್ಥಿತಿ

ರಾಜ್ಯದ ವಿವಿಧ ಜೈಲುಗಳಲ್ಲಿ ಸಾವಿರಾರು ಮಂದಿ ವಿಚಾರಣಾಧೀನ ಕೈದಿಗಳು ಅತಂತ್ರಸ್ಥಿತಿಯಲ್ಲಿ ಕಾಲ ಹಾಕುತ್ತಿದ್ದಾರೆ ಎಂಬ ಆತಂಕಕಾರಿ ಸಂಗತಿ ಬೆಳಕಿಗೆ ಬಂದಿದೆ. ಇವರಲ್ಲಿ ಅರ್ಧದಷ್ಟು ಮಹಿಳೆಯರಿದ್ದಾರೆ. ತಮ್ಮ ಮೇಲೆ ದಾಖಲಾಗಿರುವ ಪ್ರಕರಣಗಳ ವಿಚಾರಣೆ ಯಾವಾಗ ನಡೆದೀತು ಎಂಬ ಕನಿಷ್ಠ ಮಾಹಿತಿಯೂ ಅವರಿಗೆ ಸಿಗುತ್ತಿಲ್ಲ. ವಕೀಲರನ್ನು ನೇಮಕ ಮಾಡಿಕೊಳ್ಳಲು ಅವಕಾಶ ನೀಡುವಂತೆ ಕೋರ್ಟುಗಳಿಗೆ ಮನವಿ ಮಾಡಿಕೊಳ್ಳುವ ಅವಕಾಶ ಅನೇಕರಿಗೆ ಸಿಕ್ಕಿಲ್ಲ. ಎಷ್ಟೋ ಮಂದಿ ಮಾಡಿದ ಅಪರಾಧಕ್ಕೆ ಕೋರ್ಟ್ ವಿಧಿಸುವ ಶಿಕ್ಷೆಯ ಅವಧಿಗಿಂತ ಹೆಚ್ಚು ಸಮಯವನ್ನು ವಿಚಾರಣಾಧೀನ ಕೈದಿಯಾಗಿ ಕಳೆದಿರುವ ಸಾಧ್ಯತೆಗಳಿವೆ. ಈ ಬೆಳವಣಿಗೆ ನಿಜಕ್ಕೂ ದುರದೃಷ್ಟಕರ. ಯಾವುದೇ ವ್ಯಕ್ತಿಯನ್ನು ವಿಚಾರಣೆ ನಡೆಸದೆ ದೀರ್ಘಕಾಲ ಜೈಲಿನಲ್ಲಿ ಇಟ್ಟುಕೊಳ್ಳುವಂತಿಲ್ಲ ಎಂಬ ಕಾನೂನು ಇದ್ದರೂ ವಿಚಾರಣೆ ಇಲ್ಲದೆ ಸಾವಿರಾರು ಜನರು ಜೈಲುಗಳಲ್ಲೇ ಕೊಳೆಯುವ ಪರಿಸ್ಥಿತಿ ಸರ್ಕಾರಕ್ಕೆ ಗೌರವ ತರುವುದಿಲ್ಲ. ವಿಚಾರಣಾಧೀನ ಕೈದಿಗಳ ಬಗ್ಗೆ ಸರ್ಕಾರ ಹಾಗೂ ಸಂಬಂಧಪಟ್ಟ ಇಲಾಖೆಗೆ ಕನಿಷ್ಠ ಕಾಳಜಿ ಇಲ್ಲ ಎನ್ನುವುದಕ್ಕೆ ಇದು ನಿದರ್ಶನ.

ವಿಚಾರಣಾಧೀನ ಕೈದಿಗಳನ್ನು ನ್ಯಾಯಾಲಯಕ್ಕೆ ಕರೆತರಲು ಅಗತ್ಯವಾದ ಮಹಿಳಾ ಪೊಲೀಸ್ ಸಿಬ್ಬಂದಿ ಮತ್ತು ವಾಹನಗಳು ಇಲ್ಲ ಎನ್ನುವುದು ವಿಳಂಬಕ್ಕೆ ಕಾರಣ ಎನ್ನಲಾಗಿದೆ. ಇದು ಸಂಬಂಧಪಟ್ಟ ಇಲಾಖೆಯ ಸಮಸ್ಯೆ. ಸಿಬ್ಬಂದಿ ನೇಮಕ, ವಾಹನಗಳ ಖರೀದಿ ಇತ್ಯಾದಿ ಅನುಕೂಲ ಕಲ್ಪಿಸುವುದು ರಾಜ್ಯ ಸರ್ಕಾರದ ಜವಾಬ್ದಾರಿ. ವಾಹನಗಳಿಲ್ಲ, ಕಾವಲು ಸಿಬ್ಬಂದಿ ಇಲ್ಲ ಎಂಬ ಕಾರಣದಿಂದ ವಿಚಾರಣಾಧೀನ ಕೈದಿಗಳನ್ನು ಜೈಲುಗಳಲ್ಲೇ ಕೊಳೆಯುವಂತೆ ಮಾಡುವುದು ಸಮರ್ಥನೀಯ ಅಲ್ಲ. ರಾಜ್ಯ ಸರ್ಕಾರಕ್ಕೆ ಈ ಸಮಸ್ಯೆ ಗೊತ್ತಿಲ್ಲ ಎನ್ನುವಂತಿಲ್ಲ. ಕೈದಿಗಳನ್ನು ನ್ಯಾಯಾಲಯಕ್ಕೆ ಕರೆದೊಯ್ಯಲು ಅಗತ್ಯ ಸಿಬ್ಬಂದಿ, ವಾಹನ ಇತ್ಯಾದಿ ವ್ಯವಸ್ಥೆ ಮಾಡಲು ಎಷ್ಟು ಸಮಯ ಬೇಕು? ಇದಕ್ಕಾಗಿ ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಂಡಿದೆ ಎಂಬುದನ್ನು ಸರ್ಕಾರ ಹೇಳಬೇಕು. ಸರ್ಕಾರದ ಲೋಪಕ್ಕೆ ಕೈದಿಗಳನ್ನು ಜೈಲುಗಳಲ್ಲಿ ಕೊಳೆ ಹಾಕುವುದು ಸಮರ್ಥನೀಯ ಅಲ್ಲ.

ಎರಡು ತಿಂಗಳ ಹಿಂದೆ ಲಭ್ಯವಾದ ಮಾಹಿತಿ ಪ್ರಕಾರ ಬೆಂಗಳೂರಿನ ವಿವಿಧ ಕೋರ್ಟುಗಳ ಎದುರು ಹಾಜರು ಪಡಿಸಬೇಕಾದ ಕೈದಿಗಳ ಸಂಖ್ಯೆ ಎಂಟು ಸಾವಿರಕ್ಕೂ ಹೆಚ್ಚು. ಕೋರ್ಟ್ ಮುಂದೆ ಒಮ್ಮೆಯೂ ಹಾಜರಾಗದ ಅಸಂಖ್ಯಾತ ಮಹಿಳಾ ಕೈದಿಗಳಿದ್ದಾರೆ ಎನ್ನಲಾಗಿದೆ. ಹಲವಾರು ತಿಂಗಳ ಕಾಲ ವಿಚಾರಣಾಧೀನ ಕೈದಿಯಾಗಿ ಜೈಲುಗಳಲ್ಲಿದ್ದು, ವಿಚಾರಣೆಯ ನಂತರ ನಿರಪರಾಧಿ ಎಂಬುದು ಸಾಬೀತಾಗಿ ಬಿಡುಗಡೆ ಪಡೆದರೂ ಅವರನ್ನು ಸಮಾಜ ಅಪರಾಧಿ ಎಂದೇ ಪರಿಗಣಿಸುವ ಸಾಧ್ಯತೆ ಇದೆ. ದೀರ್ಘಕಾಲ ವಿಚಾರಣೆ ನಡೆಸದಿದ್ದರೆ ಯಾವ ತಪ್ಪೂ ಮಾಡದೆ ಜೈಲಿಗೆ ಬಂದ ಅಮಾಯಕ ಮಹಿಳೆಯರು ಮಾನಸಿಕವಾಗಿ ಕುಗ್ಗಿ ಹೋಗುತ್ತಾರೆ. ಆರು ವರ್ಷದೊಳಗಿನ ಮಕ್ಕಳು ಆರೋಪಿ ತಾಯಿಯ ಜತೆಯಲ್ಲಿ ಜೈಲಿನಲ್ಲಿ ಇರಲು ಕಾನೂನು ಅವಕಾಶ ಮಾಡಿಕೊಟ್ಟಿದೆ. ಅಂತಹ ಮಹಿಳಾ ಕೈದಿಗಳ ಜತೆಯಲ್ಲಿ ಅವರ ನಿರಪರಾಧಿ ಮಕ್ಕಳು ದೀರ್ಘಕಾಲ ಜೈಲುಗಳಲ್ಲಿ ಕಳೆಯುವಂತಹ ಪರಿಸ್ಥಿತಿಯನ್ನು ಸರ್ಕಾರವೇ ನಿರ್ಮಾಣ ಮಾಡಿದೆ. ವಿಚಾರಣೆ ಇಲ್ಲದೆ ದೀರ್ಘಕಾಲ ಮಹಿಳೆಯರು ಜೈಲುಗಳಲ್ಲಿ ಕಳೆಯುವುದರಿಂದ ಅವರ ವಯಸ್ಕ ಮಕ್ಕಳು ಮತ್ತು ಕುಟುಂಬದ ಇತರ ಸದಸ್ಯರ ಮೇಲೆ ಆಗುವ ಪರಿಣಾಮಗಳನ್ನೂ ಸರ್ಕಾರ ಗಮನಿಸಬೇಕು.

ಕೈದಿಗಳ ಮೇಲಿರುವ ಆರೋಪ ಹಾಗೂ ಅದಕ್ಕೆ ಕೋರ್ಟು ವಿಧಿಸುವ ಶಿಕ್ಷೆಯ ಪ್ರಮಾಣವನ್ನು ಗಮನದಲ್ಲಿ ಇಟ್ಟುಕೊಂಡು ಈಗಾಗಲೇ ಅಷ್ಟು ಸಮಯವನ್ನು ವಿಚಾರಣಾಧೀನ ಕೈದಿಯಾಗಿ ಕಳೆದಿರುವವರನ್ನು ಬಿಡುಗಡೆ ಮಾಡುವ ಪ್ರಸ್ತಾವ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಕೇಂದ್ರ ಕಾನೂನು ಸಚಿವರು ಇತ್ತೀಚೆಗೆ ಹೇಳಿದ್ದಾರೆ. ಈ ಪ್ರಸ್ತಾವ ಸ್ವಾಗತಾರ್ಹ. ಇದು ಬೇಗ ಕಾರ್ಯರೂಪಕ್ಕೆ ಬರಬೇಕು. ವಿಚಾರಣೆ ಇಲ್ಲದೆ ಸಾವಿರಾರು ಜನರು ಜೈಲುಗಳಲ್ಲಿ ಕಳೆಯುತ್ತಿರುವುದು ರಾಜ್ಯ ಸರ್ಕಾರ ಹಾಗೂ ಕೋರ್ಟುಗಳಿಗೆ ಗೊತ್ತಿದೆ. ಈ ಸಮಸ್ಯೆಗೆ ಒಂದು ಪರಿಹಾರ ಹುಡುಕುತ್ತೇವೆ ಎಂದು ಸರ್ಕಾರ ಹೇಳಿದರೆ ಸಾಲದು. ಪೊಲೀಸ್ ಇಲಾಖೆಗೆ ಬೇಕಾದ ಸಿಬ್ಬಂದಿ, ವಾಹನ ಇತ್ಯಾದಿ ಸೌಲಭ್ಯ ಒದಗಿಸುವುದಕ್ಕೆ ಸರ್ಕಾರ ಆದ್ಯತೆ ನೀಡಬೇಕು. ವಿಚಾರಣೆ ನಡೆಸದೆ ಸಾವಿರಾರು ಜನರನ್ನು ಜೈಲುಗಳಲ್ಲಿ ಇಟ್ಟುಕೊಳ್ಳುವುದು ಸರ್ಕಾರಕ್ಕೆ ದೊಡ್ಡ ಹೊರೆ. ಜನರ ತೆರಿಗೆ ಹಣ ವ್ಯರ್ಥ ಆಗಬಾರದು.

■ ಪ್ರೇಮಕುಮಾರ್ ಹರಿಯಬ್ಬೆ

ಯಾವುದೇ ವ್ಯಕ್ತಿಯನ್ನು ವಿಚಾರಣೆ ನಡೆಸದೆ ದೀರ್ಘಕಾಲ ಜೈಲಿನಲ್ಲಿ ಇಟ್ಟುಕೊಳ್ಳುವಂತಿಲ್ಲ ಎಂಬ ಕಾನೂನು ಇದ್ದರೂ ವಿಚಾರಣೆ ಇಲ್ಲದೆ ಸಾವಿರಾರು ಜನರು ಜೈಲುಗಳಲ್ಲೇ ಕೊಳೆಯುವ ಪರಿಸ್ಥಿತಿ ಸರ್ಕಾರಕ್ಕೆ ಗೌರವ ತರುವುದಿಲ್ಲ. ವಿಚಾರಣಾಧೀನ ಕೈದಿಗಳ ಬಗ್ಗೆ ಸರ್ಕಾರ ಹಾಗೂ ಸಂಬಂಧಪಟ್ಟ ಇಲಾಖೆಗೆ ಕನಿಷ್ಠ ಕಾಳಜಿ ಇಲ್ಲ ಎನ್ನುವುದಕ್ಕೆ ಇದು ನಿದರ್ಶನ.



ಹೂಗಾರ